**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಶಿಲ್ ಜಿ. ನಮೋಶಿ ಹಾಗೂ ಡಾ|| ತಳವಾರ ಸಾಬಣ್ಣ, ಇವರ ನಿಯಮ 72 ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರ.**

*********

**ಪ್ರಶ್ನೆ:-**

ರಾಜ್ಯದಲ್ಲಿ ಇರುವ ತಳವಾರ, ಪರಿವಾರ, ನಾಯ್ಕಡ, ನಾಯಕ ಜಾತಿಗಳನ್ನು ಪ್ರವರ್ಗ-1 ರಿಂದ ತೆಗೆದುಹಾಕಿ ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡಿ ಆದೇಶ ಮಾಡಿರುವ ರಾಜ್ಯ ಸರ್ಕಾರವು ಈ ಆದೇಶದಂತೆ ಗೆಜೆಟ್ ಹೊರಡಿಸಿ ನಂತರ ದಿನಾಂಕ:20.10.2022 ರಂದು ಪ್ರವರ್ಗ-1ರ ಹಿಂದುಳಿದ ವರ್ಗಗಳ ಜಾತಿಗಳ ಪಟ್ಟಿಯಲ್ಲಿ ಬರುತ್ತಿದ್ದ ಇವುಗಳನ್ನು ತೆಗೆದು ಹಾಕಿ 2022ರ ಡಿಸೆಂಬರ್ ನಲ್ಲಿ ಜಾತಿ ಪ್ರಮಾಣ ಪತ್ರಗಳನ್ನು ನೀಡಲು ಆದೇಶಿಸಿದೆ. ಆದರೆ 20.10.2022 ಕ್ಕಿಂತಲೂ ಹಿಂದೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿಯಲ್ಲಿ ಬರುವ ಸರ್ಕಾರದ ವಿವಿಧ ಯೋಜನೆಗಳಿಗೆ ಈಗಾಗಲೇ ಅರ್ಜಿಸಲ್ಲಿಸಿ ನಂತರ ಫಲಾನುಭವಿಗಳಾಗಿರುವ ಜನರಿಗೆ ದಾಖಲೆ ಪತ್ರಗಳನ್ನು ನೀಡುವಾಗ ಎಸ್.ಟಿ ಪ್ರಮಾಣ ಪತ್ರವಿದೆ ಎಂದು ಇಲಾಖೆಯ ನಿಗಮದಿಂದ ಈ ಫಲಾನುಭವಿಗಳು ನಿಗಮಕ್ಕೆ ಒಳಪಡುವುದಿಲ್ಲ ಎಂದು ಅವರ ಅರ್ಹತೆಯನ್ನು ತಿರಸ್ಕರಿಸುತ್ತಿರುವ ವಿಷಯವನ್ನು ಸರಿಪಡಿಸಿ ಯೋಜನೆಗಳಿಗೆ ಆಯ್ಕೆಯಾಗಿರುವ ಫಲಾನುಭವಿಗಳಿಗೆ ನ್ಯಾಯ ಒದಗಿಸಿಕೊಡುವ ಬಗ್ಗೆ ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾನ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಹೇಳಿಕೆ:**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿಯಲ್ಲಿ ಬರುವ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ 2022-23ನೇ ಸಾಲಿನಲ್ಲಿ ಸ್ವಯಂ ಉದ್ಯೋಗ ಸಾಲ ಯೋಜನೆ, ಅರಿವು ಶೈಕ್ಷಣಿಕ ಸಾಲ ಯೋಜನೆ, ವಿದೇಶಿ ವಿಶ್ವ ವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಸಾಲ ಯೋಜನೆ, ಹೊಲಿಗೆ ಯಂತ್ರ ವಿತರಣೆ ಯೋಜನೆ ಹಾಗೂ ಗಂಗಾ ಕಲ್ಯಾಣ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ.

ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ತಳವಾರ ಮತ್ತು ಪರಿವಾರ ಜಾತಿಗಳಿಗೆ ಒಳಪಟ್ಟಂತೆ ಸ್ವೀಕರಿಸಲಾದ ಅರ್ಜಿಗಳನ್ನು ತಿರಸ್ಕರಿಸಿರುವುದಿಲ್ಲ. ನಾಯ್ಕಡ, ನಾಯಕ ಜಾತಿಗಳು ಹಿಂದುಳಿದ ವರ್ಗಗಳಡಿ ಬರುವುದಿಲ್ಲ. ವಿವಿಧ ಯೋಜನೆಗಳಡಿ ಪರಿವಾರ ಜಾತಿಗೆ ಒಳಪಟ್ಟ ಯಾವುದೇ ಅರ್ಜಿಗಳು ಸ್ವೀಕೃತಗೊಂಡಿರುವುದಿಲ್ಲ. ದಿನಾಂಕ: 20.10.2022 ಕ್ಕಿಂತಲೂ ಹಿಂದೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಪ್ರವರ್ಗ-1ರಲ್ಲಿ ಬರುವ ತಳವಾರ ಜಾತಿಗೆ ಸೇರಿದ ಒಟ್ಟಾರೆ 417 ಅರ್ಜಿಗಳು ವಿವಿಧ ಯೋಜನೆಗಳಡಿ ಸ್ವೀಕೃತಗೊಂಡಿರುತ್ತವೆ. ಫಲಾನುಭವಿಗಳ ಆಯ್ಕೆ ಸಮಿತಿಗಳು ವಿವಿಧ ಯೋಜನೆಗಳ ಮಾರ್ಗಸೂಚಿ/ನಿಯಮಾನುಸಾರ ಅರ್ಹತೆಯ ಬಗ್ಗೆ ಪರಿಶೀಲಿಸಿ 50 ಅರ್ಜಿಗಳನ್ನು ಆಯ್ಕೆಮಾಡಿರುತ್ತದೆ. ಆಯ್ಕೆಯಾದ ಫಲಾನುಭವಿಗಳಿಗೆ ಸಾಲ/ಸೌಲಭ್ಯ ಒದಗಿಸಲು ಕ್ರಮವಹಿಸಲಾಗುತ್ತದೆ.

**ಸಂಖ್ಯೆ**:ಹಿಂವಕ 367 ಬಿಎಂಎಸ್ 2023

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು